Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬಿಬಿಎಂಪಿ/ವಾ.22/ಜೆ.ಸಿ ಉ/ಪಿಆರ್/54/2022–23

ಸಹಾಯಕ ಅಭಿಯಂತರರ ಕಛೇರಿ
ಜೆ.ಸಿ ನಗರ ಉಪ–ವಿಭಾಗ, ಪೂರ್ವ ವಲಯ
ವಿ. ನಾಗೇನಹಳ್ಳಿ, ವಾರ್ಡ್ ನಂ;22
ಬೆಂಗಳೂರು – 560032.
ದಿನಾಂಕ: 16–07–2022

## ದಿನಾಂಕ; 16–07–2022 ರಂದು ವಾರ್ಡ್ ಸಮಿತಿ ಸಭೆಯ ನಡವಳಿಗಳು;–

- ಶ್ರೀ. ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ರವರು
- ಶ್ರೀಮತಿ. ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ನಿರ್ವಹಣೆ
- ಶ್ರೀ. ಮಧು, ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ
- ಶ್ರೀ. ಮುನಿರಾಮಣ್ಣ, ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು
- ಶ್ರೀಮತಿ. ರಾಜೇಶ್ವರಿ, ಸರ್ಕಾರಿ ಆಸ್ಪತ್ರೆ ಚೋಳನಾಯಕನಹಳ್ಳಿ(TBHR), ಆರೋಗ್ಯ ಪರೀವೀಕ್ಷಕರು
- ಶ್ರೀಮತಿ. ನವ್ಯ, ಸರ್ಕಾರಿ ಆಸ್ಪತ್ರೆ ಸಿಬ್ಬಂದಿ (ನರ್ಸ್)
- ಶ್ರೀ. ಉದಯ್ ಚಂದನ್, ಕೆ.ಆರ್.ಡ್ಬ್ಲ್ಯೂ.ಎ ಸದಸ್ಯರು
- ಶ್ರೀ ಫರ್ನಾಂಡಿಸ್, ನಾಗರೀಕರು ಕನಕನಗರ
- ಶ್ರೀ. ಕಲೀಲ್ ರೆಹಮಾನ್, ನಾಗರೀಕರು
- ಶ್ರೀಮತಿ ನೆನೂ ರವಿ, ನಾಗರೀಕರು ಸನ್ ರೈಸ್ ಕಾಲೋನಿ
- ಶ್ರೀ. ನೀಲಕಂಠ, ವಾರ್ಡ್ ನಾಗರೀಕರು

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮತಿ ಕಾರ್ಯದರ್ಶಿಯವರಾದ ಶ್ರೀ. ಗುರುಸಿದ್ದಪ್ಪ .ಜಿ, ವಾರ್ಡ್ ಸಮಿತಿ ಅಧ್ಯಕ್ಷರು, ಸಮಿತಿಯ ಸದಸ್ಯರುಗಳು ಹಾಗೂ ವಾರ್ಡ್ ಸಂಖ್ಯೆ; 22ರ ನಾಗರೀಕರು ಹಾಗೂ ಎಲ್ಲ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಿದರು.

Bruhat Bengaluru Mahanagara Palike

ಶ್ರೀ. ಗುರುಸಿದ್ದಪ್ಪ. ಜಿ ವಾರ್ಡ್ ಕಾರ್ಯದರ್ಶಿಗಳು ಸಭೆಗೆ ಹಾಜರಿದ್ದ ಅಧಿಕಾರಿಗಳ ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು, ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು, ಹಾಗೂ ದಿನಾಂಕ; 18–06–2022 ರಂದು ನಡೆದ ವಾರ್ಡ್ ಸಮಿತಿಯ ನಡವಳಿಗಳನ್ನು ಪುನರಾವಲೋಕನ ಮಾಡಲಾಯಿತು. ಹಿಂದಿನ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ಕುರಿತು ಈ ದಿನಾಂಕದವರೆಗೆ ನಿರ್ವಹಿಸಿದ ಕೆಲಸಗಳ ಬಗ್ಗೆ ಸದಸ್ಯರುಗಳಿಗೆ ತಿಳಿಸಲಾಯಿತು.

- ಶ್ರೀ. ಮುನಿರಾಮಣ್ಣ, ವಾರ್ಡ್ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ವಾರ್ಡ್‌ನಲ್ಲಿ ಕೋವಿಡ್–19 +veಕೇಸ್‌ಗಳು ನಿಯಂತ್ರಣಕ್ಕೆ ಬಂದಿದ್ದು, ಅದರಂತೆ ವಾರ್ಡಿನಲ್ಲಿ 18 ರಿಂದ 60 ವರ್ಷ ಮೇಲ್ಪಟ್ಟ ಸಾರ್ವಜನಿಕರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಬೂಸ್ಟರ್ ಡೋಸ್‌ಗಳನ್ನು ನೀಡುತ್ತೀರುವಾ ಬಗ್ಗೆ ತಿಳಿಸಿದರು. ಹಾಗೂ ಕೋವಿಡ್–19 +ve ಕೇಸ್‌ನಿಂದ ಮೃತಪಟ್ಟ ವ್ಯಕ್ತಿಯ ಕುಟುಂಬಗಳಿಗೆ ತಲಾ 1.50 ಲಕ್ಷಗಳಷ್ಟು ಸರ್ಕಾರದಿಂದ ಪರಿಹಾರ ಧನವನ್ನು ನೀಡುತ್ತೀರುವ ಬಗ್ಗೆ ತಿಳಿಸಿದರು.
- ಶ್ರೀಮತಿ ರಾಜೇಶ್ವರಿ, ಸರ್ಕಾರಿ ಆಸ್ಪತ್ರೆ ಚೋಳನಾಯಕನಹಳ್ಳಿ(TBHR), ಆರೋಗ್ಯ ಪರೀವೀಕ್ಷಕರು, ಮಾತನಾಡುತ್ತಾ, ವಾರ್ಡಿನಲ್ಲಿ ಮಂಕಿ ಪಾಕ್ಸ್ ವೈರಾಸ್ ರೋಗವು ಹರಡುವ ಸಾಧ್ಯತೆಗಳಿರುವುದರಿಂದ ಅದನ್ನು ತಡೆಗಟ್ಟುವಂತೆ ಸೂಕ್ತ ಮುಂಜಾಗ್ರತ ಕ್ರಮಕೈಗೊಳ್ಳುತ್ತೀರುವ ಬಗ್ಗೆ ತಿಳಿಸಿದರು.
- ಮಂಕಿಪಾಕ್ಸ್ ವೈರಾಸ್ ಸೋಕಿಂತ ವ್ಯಕ್ತಿಯಿಂದ ಮತ್ತೋಬ್ಬರ ವ್ಯಕ್ತಿಗೆ ಹರಡುವುದರಿಂದ , ತಲೆನೋವು, ಸ್ನಾಯು ನೋವು, ಬೆನ್ನು ನೋವು, ಊದಿಕೊಂಡ ದುಗ್ಧರಸ ಗ್ರಂಥಿಗಳು, ಮತ್ತು ಶೀತ ಈ ರೀತಿಯಾದ ಯಾವುದೇ ರೋಗ ಲಕ್ಷಣ ಕಂಡು ಬಂದಲ್ಲಿ ಜನರು ನಿರ್ಲಕ್ಷಿಸದೇ ಹತ್ತಿರ ಆಸ್ಪತ್ರೆಯಲ್ಲಿ ತೆರಳಿ ತಪ್ಪದೇ ಚಿಕಿತ್ಸೆ ಪಡೆದುಕೊಳ್ಳಬೇಕೆಂದು ತಿಳಿಸಿದರು.
- ಶ್ರೀ. ಉದಯ್ ಚಂದನ್, ಕೆ.ಆರ್.ಡ್ಲ್ಯೂ.ಎ ಸದಸ್ಯರು ಮಾತನಾಡುತ್ತಾ, ಕನಕನಗರದ 10ನೇ ಕ್ರಾಸ್ ರಸ್ತೆಯಲ್ಲಿ ಕಸವು ರಸ್ತೆ ಬದಿಯಲ್ಲಿ ಅಲ್ಲಲ್ಲಿ ಬಿದ್ದಿರುವುದರಿಂದ ಕೂಡಲೇ ರಸ್ತೆಯ ಬದಿಯಲ್ಲಿರುವ ಕಸವನ್ನು ತೆರವುಗೊಳಿಸುವಂತೆ ತಿಳಿಸಿದರು.
- ಶ್ರೀಮತಿ ಪ್ರೇಮ ಕುಮಾರಿ, ಸನ್ ರೈಸ್ ಕಾಲೋನಿ ನಾಗರೀಕರು ಮಾತನಾಡುತ್ತಾ 1ನೇ ಅಡ್ಡರಸ್ತೆಯಲ್ಲಿ ಒಳಚರಂಡಿಯು ಹಾಳಾಗಿರುವುದರಿಂದ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಶೀಘ್ರವಾಗಿ ಸರಿಪಡಿಸುವಂತೆ ತಿಳಿಸಿದರು. ಈಗಾಗಲೇ ಅದನ್ನು ಸರಿಪಡಿಸಿರುವುದಾಗಿ ತಿಳಿಸಿದರು.
- ಶ್ರೀಮತಿ ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ವಾರ್ಡಿನ ಮುಖ್ಯರಸ್ತೆ ಹಾಗೂ ಅಡ್ಡರಸ್ತೆಯ ಕಪ್ಪು ಚುಕ್ಕೆ (Black Spot) ಸ್ಥಳಗಳಲ್ಲಿ ಕಡ್ಡಾಯವಾಗಿ ಔಷಧ ಸಿಂಪಡಣೆ (Fogging spray)ಯನ್ನು ಮಾಡುತ್ತೀರುವ ಬಗ್ಗೆ ಸಭೆಗೆ ಹಾಜರಿದ್ದ ಸದಸ್ಯರಿಗೆ ತಿಳಿಸಿದರು.
- ವಾರ್ಡಿನ Garbage dumping pointನ ಹತ್ತಿರ ಕೋಳಿ ಮಾಂಸವನ್ನು ಸಾರ್ವಜನಿಕರು ತಂದು ಹಾಕುತ್ತಿರುವುದರಿಂದ ಕಸ ನಿರ್ವಹಣೆಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ ತಿಳಿಸಿದರು. ಹಾಗೂ ವಾರ್ಡಿನಲ್ಲಿ

ಸಾರ್ವಜನಿಕರು ಹಸಿ ಕಸ ಮತ್ತು ಒಣ ಕಸವನ್ನು ಬೇರ್ಪಡಿಸದೇ ಕಸವನ್ನು ಹಾಕುತ್ತಿದ್ದು, ಇದರ ಬಗ್ಗೆ ಸಾರ್ವಜನಿಕರಿಗೆ ಮನೆ ಮನೆಗೆ ತೆರಳಿ ಒಣಕಸ ಮತ್ತು ಹಸಿ ಕಸ ಬೇರ್ಪಡಿಸುವುದರ ಅರಿವು ಮೂಡಿಸುತ್ತೀರುವ ಬಗ್ಗೆ ತಿಳಿಸಿದರು.

- ಶ್ರೀ. ಮಧು, ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ವಾರ್ಡಿನಲ್ಲಿ ಕಸದ ನಿರ್ವಹಣೆ ಸರಿಯಾದ ರೀತಿಯಲ್ಲಿ ಮಾಡುತ್ತೀರುವ ಬಗ್ಗೆ ಸಭೆಯಲ್ಲಿದ್ದ ಜನರಿಗೆ ತಿಳಿಸಿದರು.
- ಶ್ರೀ ಗುರುಸಿದ್ದಪ್ಪ, ಸಹಾಯಕ ಅಭಿಯಂತರರು ಮಾತನಾಡುತ್ತಾ, ವಾರ್ಡ್‌ನ ವ್ಯಾಪ್ತಿಯಲ್ಲಿ ಬರುವ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಅಲ್ಲಲ್ಲಿ ಬಿದ್ದಿರುವ ರಸ್ತೆ ಗುಂಡಿಗಳನ್ನು ವೆಟ್ ಮಿಕ್ಸ್ ಮತ್ತು ಡಾಂಬರು ಮಿಶ್ರಿತ ಜಲ್ಲಿಕಲ್ಲುಗಳಿಂದ ಗುಂಡಿಗಳನ್ನು ಮುಚ್ಚುವ ಕಾಮಗಾರಿ ಈಗಾಗಲೇ ಮುಗಿಸಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಗೆ ತಿಳಿಸಲಾಯಿತು.
- ಶ್ರೀ ರವಿ, ನಾಗರೀಕರು ಮಾತನಾಡುತ್ತಾ, ಕನಕನಗರದ 10ನೇ ಕ್ರಾಸ್ ರಸ್ತೆಯಲ್ಲಿ Street light ಪೋಲ್ ಹಾಳಾಗಿರುವುದರಿಂದ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಶೀಘ್ರವಾಗಿ ಹೊಸದಾಗಿ Street light ಪೋಲ್‌ಗಳನ್ನು ಅಳವಡಿಸುವಂತೆ ತಿಳಿಸಿದರು.
- ಶ್ರೀ ಪುನೀತ್ ಕುಮಾರ್, ನಾಗರೀಕರು ಮಾತನಾಡುತ್ತಾ, ಕನಕನಗರದ 1ನೇ ಮುಖ್ಯರಸ್ತೆ ಗಣೇಶ ದೇವಸ್ಥಾನದ ಹತ್ತಿರ ಗುಂಡಿ ಬಿದ್ದಿರುವುದರಿಂದ ವೆಟ್ ಮಿಕ್ಸ್ ಮತ್ತು ಡಾಂಬರಿನಿಂದ ಶೀಘ್ರವಾಗಿ ಬಿದ್ದಿರುವ ರಸ್ತೆ ಗುಂಡಿಯನ್ನು ಮುಚ್ಚುವಂತೆ ತಿಳಿಸಿದರು. ಈಗಾಗಲೇ ರಸ್ತೆ ಗುಂಡಿಯನ್ನು ಡಾಂಬರಿನಿಂದ ಮುಚ್ಚಿರುವುದಾಗಿ ತಿಳಿಸಿದರು.
- ಶ್ರೀ. ಸೂರಿ, ನಾಗರೀಕರು ಮಾತನಾಡುತ್ತಾ, ಪಟೇಲ್ ಮುನಿಯಪ್ಪ ಬಡಾವಣೆಯ 5ನೇ ಅಡ್ಡರಸ್ತೆಯಲ್ಲಿ Street light ಗಳು ಹಾಳಾಗಿರುವುದರಿಂದ ಕೂಡಲೇ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ Street lightಗಳನ್ನು ಸರಿಪಡಿಸುವಂತೆ ತಿಳಿಸಿದರು. ಈಗಾಗಲೇ ಹಾಳಾಗಿರುವ Street lightಗಳನ್ನು ಸರಿಪಡಿಸಿರುವುದಾಗಿ ತಿಳಿಸಿದರು.
- ಶ್ರೀ ಫರ್ನಾಂಡಿಸ್, ನಾಗರೀಕರು ಮಾತನಾಡುತ್ತಾ, ಕನಕನಗರದ 7ನೇ ಕ್ರಾಸ್ ಹತ್ತಿರದ ರಸ್ತೆಯಲ್ಲಿ ಮತ್ತು ಕೆ.ಎಚ್.ಬಿ ಮುಖ್ಯರಸ್ತೆಯ ರೈಲ್ವೆ ಹಳಿ ಬಳಿ ಹತ್ತಿರ Street light ಗಳು ಹಾಳಾಗಿದ್ದು, ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಕೂಡಲೇ Street lightಗಳನ್ನು ಸರಿಪಡಿಸುವಂತೆ ತಿಳಿಸಿದರು.
- ವಾರ್ಡಿನಲ್ಲಿ ಕೆಲವು ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಅಲ್ಲಲ್ಲಿ ಗುಂಡಿಗಳು ಬಿದ್ದಿರುವುದರಿಂದ ಅದನ್ನು ವೆಟ್ ಮಿಕ್ಸ್ ಮತ್ತು ಡಾಂಬರಿನಿಂದ ಶೀಘ್ರವಾಗಿ ಬಿದ್ದಿರುವ ರಸ್ತೆ ಗುಂಡಿಯನ್ನು ಮುಚ್ಚುವಂತೆ ತಿಳಿಸಿದರು.
- ಶ್ರೀ ನೀಲಕಂಠ, ವಾರ್ಡ್ ನಾಗರೀಕರು ಮಾತನಾಡುತ್ತಾ, 60 ವರ್ಷ ಮೇಲ್ಪಟ್ಟ ಸಾರ್ವಜನಿಕರಿಗೆ ವೃದ್ಧಾಪ್ಯ ವೇತನದ ಅರ್ಜಿಯನ್ನು ಎಲ್ಲಿ ಪಡೆದುಕೊಳ್ಳಬೇಕು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಎಲ್ಲಿ ಸಲ್ಲಿಸಬೇಕೆಂದರ ಮಾಹಿತಿಯನ್ನು ಕೇಳಿದರು. ಅದಕ್ಕೆ ವಾರ್ಡ್ ಅಧ್ಯಕ್ಷರು ಮಾತನಾಡುತ್ತಾ ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಬಿಬಿಎಂಪಿ ಕಛೇರಿಯಲ್ಲಿ ಸಲ್ಲಿಸಿದರೆ ಅದರ ಮುಂದಿನ ಕ್ರಮಕ್ಕೆಗೊಳ್ಳುವುದಾಗಿ ತಿಳಿಸಿದರು.

Bruhat Bengaluru
Mahanagara Palike

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡಕ್ರಮದ ಬಗ್ಗೆ ವರದಿ ಪೂರ್ಣಗೊಂಡ ಭಾವಚಿತ್ರ ಹಾಗೂ ಲಿಖಿತ ವರದಿ ತಯಾರಿಸಿಕೊಂಡು ಹಾಜರಾಗಲು ಸೂಚಿಸಿ ಹಾಗೂ ಹಾಜರಾಗದೆ ಇರುವ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗಿರಬೇಕೆಂದು ಸೂಚಿಸಿದರು. ಸಭೆಯನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಕಾರ್ಯದರ್ಶಿಯವರಾದ ಗುರುಸಿದ್ದಪ್ಪ .ಜಿ ರವರ ವಂದನಾರ್ಪಣೆಯೊಂದಿಗೆ ಮಧ್ಯಾಹ್ನ 01;25ಕ್ಕೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| | (ಗುರುಸಿದ್ದಪ್ಪ .ಜಿ) |
| ನೋಡೆಲ್ ಅಧಿಕಾರಿಗಳು | ವಾರ್ಡ್ ಸಮಿತಿ ಕಾರ್ಯದರ್ಶಿ |
| ಹಾಗೂ | ಹಾಗೂ |
| ವಾರ್ಡ್ ಸಮಿತಿ ಅಧ್ಯಕ್ಷರು | ಸಹಾಯಕ ಅಭಿಯಂತರರು ವಾರ್ಡ್ ನಂ:22 |